ಶ್ರೇಣಿಗಳನ್ನು ಪರಿಷ್ಕರಿಸಲು ಶ್ರೀ ಸಿ ಗೋವಾಲರೆಡ್ಡಿ, ನಿವೃತ್ತ ಕೇಂದ್ರ ಸರ್ಕಾರದ ಕಾರ್ಯದರ್ಶಿಗಳು ಇವರ ಅಧ್ಯಕ್ಷತೆಯಲ್ಲಿ ಏಕ ಸದಸ್ಯ 5ನೇ ರಾಜ್ಯ ವೇತನ ಆಯೋಗವನ್ನು ರಚಿಸಲಾಯ್ತು ತದನಂತರ, ಶ್ರೀ ಸಿ ಗೋವಾಲರೆಡ್ಡಿ ಇವರು ನಿಧನರಾದ ಪ್ರಯುಕ್ತ ಶ್ರೀ ಎಂ ಬಿ ಪ್ರಕಾಶ್, ನಿವೃತ್ತ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಇವರನ್ನು ಏಕಸದಸ್ಯ 5ನೇ ರಾಜ್ಯ ವೇತನ ಆಯೋಗದ ಅಧ್ಯಕ್ಷರನ್ನಾಗಿ ದಿನಾಂಕ 3ನೇ ಆಗಸ್ಟ್ 2006ರ ಆದೇಶದಲ್ಲಿ ನೇಮಿಸಿ, ಆಯೋಗದ ವರದಿಯನ್ನು ದಿನಾಂಕ 31ನೇ ಡಿಸೆಂಬರ್ 2006ರೊಳಗೆ ಸರ್ಕಾರಕ್ಕೆ ನಲ್ಲಿಸುವಂತೆ ಸೂಚಿಸಲಾಯ್ತು ವೇತನ ಆಯೋಗದ ಅಧ್ಯಕ್ಷರನ್ನು ಹೊಸದಾಗಿ ನೇಮಕ ಮಾಡಲಾದ ಹಿನ್ನೆಲೆಯಲ್ಲಿ, ಸರ್ಕಾರಿ ನೌಕರರ ಬೇಡಿಕೆಗಳನ್ನು ಪರಿಶೀಲಿಸಿ, ಅಂತಿಮ ವರದಿಯನ್ನು ನಲ್ಲಸಲು ಇನ್ನಷ್ಟು ಕಾಲಾವಕಾಶ ನೀಡುವಂತೆ ಆಯೋಗವು ಕೋರಿದ್ದರ ಮೇರೆಗೆ, ದಿನಾಂಕ 20ನೇ ಡಿಸೆಂಬರ್ 2006ರ ಆದೇಶದಲ್ಲಿ ಆಯೋಗವು ತನ್ನ ವರದಿಯನ್ನು ಸರ್ಕಾರಕ್ಕೆ ನಲ್ಲಿಸಲು ಮತ್ತು ಆಯೋಗದ ಇತರ ಕಾರ್ಯಕಲಾಪಗಳನ್ನು ಸಮಾಪನಗೊಳಿಸಲು ಅನುಕೂಲವಾಗುವಂತೆ ಆಯೋಗದ ಅವಧಿಯನ್ನು ದಿನಾಂಕ 30ನೇ ಏಪ್ರಿಲ್ 2007ರವರೆಗೆ ವಿಸ್ತರಿಸಲಾಗಿದೆ ಆಯೋಗವು ತನ್ನ ಅಂತಿಮ ವರದಿಯನ್ನು ಸರ್ಕಾರಕ್ಕೆ ನದ್ಯದಲ್ಲೇ ಸಲ್ಲಿಸುವ ನಿರೀಕ್ಷೆ ಇದೆ

ಇ) ಸರ್ಕಾರದ ದಿನಾಂಕ 20ನೇ ಡಿಸೆಂಬರ್ 2006ರ ಆದೇಶದಲ್ಲಿ, ಆಯೋಗವು ಅಂತಿಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಮತ್ತು ಆಯೋಗದ ಇತರ ಕಾರ್ಯಕಲಾಪಗಳನ್ನು ಸಮಾಪನಗೊಳಿಸಲು ಸಾಧ್ಯವಾಗುವಂತೆ ಆಯೋಗದ ಕಾಲಾವಧಿಯನ್ನು ದಿನಾಂಕ 30ನೇ ಏಪ್ರಿಲ್ 2007ರವರೆಗೆ ವಿಸ್ತರಿಸಲಾಗಿದ್ದು, ಆಯೋಗವು ತನ್ನ ಅಂತಿಮ ವರದಿಯನ್ನು ಸರ್ಕಾರಕ್ಕೆ ನಧ್ಯದಲ್ಲೇ ನಲ್ಲಿಸುವ ನಿರೀಕ್ಷೆ ಇದೆ

ಆಯೋಗವು ತನ್ನ ಅಂತಿಮ ವರದಿಯನ್ನು ನರ್ಕಾರಕ್ಕೆ ನಲ್ಲಿಸಿದ ನಂತರ, ಶಿಫಾರಸ್ಸುಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕುರಿತು ನೂಕ್ತ ನಮಯದಲ್ಲಿ ನೂಕ್ತ ತೀರ್ಮಾನ ತೆಗೆದುಕೊಳ್ಳುವುದು

962 (1020) ಶ್ರೀ ಶಿವಶಂಕರ್‌ರೆಡ್ಡಿ ಎನ್ ಹೆಚ್ (ಗೌರಿಬಿದನೂರು) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಬೆಂಗಳೂರಿನ ಹೊರವಲಯದಲ್ಲಿ ಉಪ ನಗರಗಳನ್ನು ಸ್ಥಾಪಿಸಿ ಅಭಿವೃದ್ಧಿಪಡಿಸುವ ಪ್ರಸ್ತಾವನೆ ನರ್ಕಾರದ ಮುಂದಿದೆಯೇ,

ಆ) ಹಾಗಿದ್ದಲ್ಲಿ, ಯಾವ ಯಾವ ಸ್ಥಳಗಳಲ್ಲಿ ಸ್ಥಾಪಿಸಲಾಗುವುದು,

ಇ) ಈ ಪ್ರಸ್ತಾವನೆ ಈಗ ಯಾವ ಹಂತದಲ್ಲಿದೆ?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು)

ಅ) ಹೌದು

ಆ) ಬಿಡದಿ, ನಂದಗುಡಿ, ರಾಮನಗರ, ಸೋಲೂರು, ಸಾತನೂರುಗಳಲ್ಲಿ ವಸಾಹತುಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ

ಇ) 5 ಟೌನ್‌ಶಿಪ್‌ಗಳ ವೈಕಿ ಬಿಡದಿ ಟೌನ್‌ಶಿಪ್‌ನ್ನು ಪ್ರಾರಂಭಿಕವಾಗಿ ಖಾಸಗಿ ಸಹಭಾಗಿತ್ವದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ ಹಾಗೂ ಯೋಜನಾ ಪ್ರದೇಶದ ಸಮೀಕ್ಷಾ ಕಾರ್ಯಕ್ಕೆ ಚಾಲನೆ ನೀಡಲಾಗಿದೆ

963 (1021) ಶ್ರೀ ಶಿವಶಂಕರ್‌ರೆಡ್ಡಿ ಎನ್ ಹೆಚ್ (ಗೌರಿಬಿದನೂರು) ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಯಲಹಂಕ–ಸೊಮಂಜಿಪಲ್ಲಿ (ಎ ಪಿ) ರಾಜ್ಯ ಹೆದ್ದಾರಿಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಲ್ಲಿ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ,

ಆ) ಹಾಗಿದ್ದಲ್ಲಿ, ಶೀಘ್ರ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಇರುವ ಅಡ್ಡಿ ಆತಂಕಗಳೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು)

ಅ) ಬಂದಿದೆ

ಆ) ಪ್ರಸ್ತಾಪಿತ ರಸ್ತೆಯು ಯಲಹಂಕ–ಹಿಂದೂಪುರ ರಾಜ್ಯ ಹೆದ್ದಾರಿ ಸಂಖ್ಯೆ 9 ಆಗಿದ್ದು, ಬೆಂಗಳೂರು ಉತ್ತರ ತಾಲ್ಲೂಕಿನ ಸರಪಳಿ 13 60 ಕಿ ಮೀ ನಿಂದ ಪ್ರಾರಂಭಗೊಂಡು 88 10 ಕಿ ಮೀ ವರೆಗೆ ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನಲ್ಲಿ ಕೊನೆಗೊಂಡು ಆಂಧ್ರಪ್ರದೇಶದಲ್ಲಿ ಮುಂದುವರಿಯುತ್ತದೆ ಸದರಿ ರಾಜ್ಯ ಹೆದ್ದಾರಿಯನ್ನು ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಕೈಗೊಳ್ಳಲಾಗುತ್ತಿರುವ ರಾಜ್ಯ ಹೆದ್ದಾರಿಗಳ ಮೂರು ವರ್ಷಗಳ (2005–08) ನಿರ್ವಹಣಾ ಯೋಜನೆ ಅಡಿಯಲ್ಲಿ, ನಿರ್ವಹಣೆಗಾಗಿ ಕೈಗೊಳ್ಳಲಾಗಿದ್ದು, ನಿರ್ವಹಣಾ ವ್ಯಾಕೇಜ್‌ನಡಿ ಮರುಡಾಂಬರೀಕರಣ ಕಾಮಗಾರಿಯನ್ನು ನಿರ್ವಹಿಸಲಾಗಿದೆ